# ರಾಮಕೃಷ್ಣ ಸುದ್ದಿ ಸಂಚಯ

## "ಸಹಕಾರ ಮಾಣಿಕ್ಯ"

ESTD : 1994

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575003.

Website:www.ramakrishnacredit.com Email: ho@ramakrishnacredit.com

ಸಂಪುಟ : IX ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ-ಮಾರ್ಚ್ 2025


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

### ಆಡಳಿತ ಮಂಡಳಿ ಚುನಾವಣೆ
### ಸದಸ್ಯ ಬಾಂಧವರಿಗೆ ಹೃತ್ಪೂರ್ವಕ ಕೃತಜ್ಞತೆಗಳು

2024-25ನೇ ಸಾಲಿನ ವರ್ಷಾಂತ್ಯದ ಪ್ರಗತಿ ಸಾಧನೆಗಳನ್ನು ತಮ್ಮ ಮುಂದಿಡುವ ಮೊದಲು, ಮುಂದಿನ ಐದು ವರ್ಷಗಳ ಅವಧಿಗೆ ಜರಗಿದ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಿದ ಮಹಿಳಾ ಕ್ಷೇತ್ರದ ಇಬ್ಬರು ಹಾಗೂ ಹಿಂದುಳಿದ ವರ್ಗದ ಕ್ಷೇತ್ರದ ಒರ್ವ ಅಭ್ಯರ್ಥಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದಲ್ಲದೆ ದಿನಾಂಕ 02.02.2025ರಂದು ಜರಗಿದ ಚುನಾವಣೆಯಲ್ಲಿ 13 ಮಂದಿ ಸಾಮಾನ್ಯ ಕ್ಷೇತ್ರದ ಅಭ್ಯರ್ಥಿಗಳಾಗಿ ಚುನಾಯಿಸಿ ನನ್ನ ನೇತೃತ್ವದಲ್ಲಿ ಸ್ಪರ್ಧಿಸಿದ ಎಲ್ಲಾ 16 ಮಂದಿ ಅಭ್ಯರ್ಥಿಗಳನ್ನು ಸಂಘದ ನಿರ್ದೇಶಕರಾಗಿ ಆಯ್ಕೆ ಮಾಡಿರುವುದಕ್ಕೆ, ಸಂಘದ ಎಲ್ಲಾ ಸದಸ್ಯ ಬಾಂಧವರಿಗೆ ನನ್ನ ಹಾಗೂ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಸತತ ಮೂರನೇ ಅವಧಿಗೆ, ಸಂಘದ ನೇತೃತ್ವ ವಹಿಸಲು ನಮಗೆ ಅವಕಾಶ ನೀಡಿರುವ ತಮಗೆಲ್ಲರಿಗೂ, ತಾವು ನಮ್ಮ ಮೇಲೆ ಇರಿಸಿರುವ ವಿಶ್ವಾಸ, ನಂಬುಗೆಗೆ ಯಾವುದೇ ಕುಂದು ಬಾರದಂತೆ ಸಂಘವನ್ನು ಮುನ್ನಡೆಸುತ್ತೇವೆ ಎಂಬ ಭರವಸೆಯನ್ನು ನೀಡುತ್ತಾ, 2024-25ನೇ ಸಾಲಿನಲ್ಲಿ ಸಂಘವು ಸಾಧಿಸಿರುವ ಪ್ರಗತಿ ವಿವರಗಳನ್ನು ತಮ್ಮ ಮುಂದಿಡಲು ಹರ್ಷಿಸುತ್ತೇನೆ.

**ಸಂಘಕ್ಕೆ 2024-25ನೇ ಸಾಲಿನಲ್ಲಿ ರೂ.16.29 ಕೋಟಿ ಸಾರ್ವಕಾಲಿಕ ದಾಖಲೆಯ ಲಾಭ**

**ಸಾಧನೆಯ ವಿಶೇಷತೆ-ದಾಖಲೆಯ ಲಾಭ, 0% NPA**

31 ವರ್ಷಗಳ ಸಾರ್ಥಕ ಸೇವೆಯನ್ನು ಸಹಕಾರಿ ಹಣಕಾಸು ಕ್ಷೇತ್ರದಲ್ಲಿ ನೀಡುತ್ತಿರುವ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯು ವರದಿ ವರ್ಷದಲ್ಲಿ ಅಮೋಘ ಸಾಧನೆಗೈದು, ದಿನಾಂಕ 31.03.2025ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ ರೂ.16.29 ಕೋಟಿ ನಿವ್ವಳ ಲಾಭಗಳಿಸಿದೆ. ಇದು ಕಳೆದ ವರ್ಷದ ಲಾಭ (ರೂ.12.01 ಕೋಟಿ) ಕ್ಕಿಂತ ರೂ.4.28 ಕೋಟಿ ಹೆಚ್ಚಳದೊಂದಿಗೆ ಶೇಕಡಾ 36 ಏರಿಕೆಯಾಗಿದೆ. 31.03.2025ಕ್ಕೆ ಸಂಘದ ಅನುತ್ಪಾದಕ ಆಸ್ತಿ ಕೇವಲ ರೂ.24 ಲಕ್ಷವಿದ್ದು ಇದು ಹೊರಬಾಕಿ ಸಾಲದ ಶೇ.0.05 ಕ್ಕೆ ಸೀಮಿತವಾಗಿರುವುದು ಹಾಗೂ ನಿವ್ವಳ ಅನುತ್ಪಾದಕ ಆಸ್ತಿಯು ಕಳೆದ 18 ವರ್ಷಗಳಿಂದ 0% ಆಗಿರುವುದು ಒಂದು ವಿಶಿಷ್ಠ ಸಾಧನೆಯಾಗಿದೆ. ಇದು ಸಂಘದ ಪ್ರಗತಿಯನ್ನು ಹಾಗೂ ಸಂಘದ ಆಡಳಿತಾತ್ಮಕ ಮತ್ತು ವ್ಯವಹಾರಾತ್ಮಕ ಸದೃಢತೆಯನ್ನು ಸೂಚಿಸುತ್ತದೆ.

**ಒಟ್ಟು ವ್ಯವಹಾರ**

2020ನೇ ಸಾಲಿನಲ್ಲಿ ಶ್ರೀ ಕೆ. ಜೈರಾಜ್ ಬಿ. ರೈಯವರು 2ನೇ ಬಾರಿ ಅಧ್ಯಕ್ಷರಾಗಿ ಸಂಘದ ನೇತೃತ್ವ ವಹಿಸಿಕೊಂಡ ಸಂದರ್ಭದಲ್ಲಿ ಹಮ್ಮಿಕೊಂಡ ವಿಷನ್ 2025 ರಂತೆ, 31.03.2025ಕ್ಕೆ ಸಂಘದ ಒಟ್ಟು ವ್ಯವಹಾರ ರೂ.1000 ಕೋಟಿ, 5 ಹೊಸ ಶಾಖೆಗಳೊಂದಿಗೆ 30 ಶಾಖೆಗಳನ್ನು ಹೊಂದುವುದು, ರೂ.10 ಕೋಟಿ ಲಾಭ, ಅನುತ್ಪಾದಕ ಆಸ್ತಿಯನ್ನು ಶೇ.10ಕ್ಕೆ ಸೀಮಿತಗೊಳಿಸುವುದು ಎಂಬ ಕಾರ್ಯಯೋಜನೆಗಳನ್ನು 31.03.2025ಕ್ಕೆ ಮೊದಲೇ ತಲುಪಿರುವುದು, ಹಾಗೂ ರೂ.1000 ಕೋಟಿಗೆ ಮೀರಿದ ಒಟ್ಟು ವ್ಯವಹಾರವನ್ನು ದಾಟಿದ ದ.ಕ. ಮತ್ತು ಉಡುಪಿ ಜಿಲ್ಲೆಯ ಪ್ರಪ್ರಥಮ ಏಕೈಕ ಕ್ರೆಡಿಟ್ ಸಹಕಾರ ಸಂಘವಾಗಿ ಮೂಡಿ ಬಂದಿರುವುದು ಸಂಘದ ಹೆಗ್ಗಳಿಕೆಯಾಗಿರುತ್ತದೆ. 31.03.2025ಕ್ಕೆ ರೂ.1094 ಕೋಟಿ ರೂಪಾಯಿಗಳ ಒಟ್ಟು ವ್ಯವಹಾರ ದಾಖಲಿಸಿ ಹೊಸ ಇತಿಹಾಸ ನಿರ್ಮಿಸಿದೆ.

**ಠೇವಣಾತಿ**

ಠೇವಣಿಗಳ ಸಂಗ್ರಹಣೆಯಲ್ಲಿ, ಬ್ಯಾಂಕುಗಳು ಮತ್ತು ಇತರ ಸಹಕಾರ ಸಂಘಗಳ ತೀವ್ರ ಪೈಪೋಟಿಯ ನಡುವೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಕಾಲಕಾಲದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ತನ್ನ 25 ಶಾಖೆಗಳ ಮುಖಾಂತರ 1,27,971 ಠೇವಣಿ ಖಾತೆಗಳಲ್ಲಿ ಒಟ್ಟು ರೂ.589 ಕೋಟಿ ರೂಪಾಯಿ ಠೇವಣಿ ಸಂಗ್ರಹಿಸಿ ಸಾಧನೆಗೈದಿದೆ.

**ಸಾಲ**

31.03.2025ಕ್ಕೆ ಸಂಘದ ಹೊರಬಾಕಿ ಸಾಲವು ರೂ.505 ಕೋಟಿಯನ್ನು ಮೀರಿದ್ದು, ಸ್ಪರ್ಧಾತ್ಮಕ ವ್ಯವಹಾರದಲ್ಲಿ 31.03.2025ಕ್ಕೆ 1643 ಖಾತೆಗಳಲ್ಲಿ ರೂ.34 ಕೋಟಿ ಆಟೋರಿಕ್ಷಾ ಸಾಲ, 521 ಯುವ ಜನತೆಗೆ ದ್ವಿಚಕ್ರ ಸಾಲ ರೂ.3.98 ಕೋಟಿ. ಅಲ್ಲದೆ ಚಿನ್ನಾಭರಣ ಸಾಲ, ಗೃಹ ಸಾಲ, ಇತರ ವಾಹನ ಸಾಲ, ಅಡವು ಸಾಲ ಮುಂತಾದ ಸಾಲ ಸೌಲಭ್ಯಗಳನ್ನು ನೀಡುತ್ತಾ ಬಂದಿದೆ.

## 31.03.2025ಕ್ಕೆ ಸಂಘದ ಸಾಧನೆಯ ಪಕ್ಷಿನೋಟ (ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು) (ರೂ. ಕೋಟಿಯಲ್ಲಿ)

| ಕ್ರ.ಸಂ. | ಕಾರ್ಯ ವಿಭಾಗ | ಮಾರ್ಚ್ 2024ಕ್ಕೆ ಇದ್ದಂತೆ (ರೂ) | ಮಾರ್ಚ್ 2025ಕ್ಕೆ ಇದ್ದಂತೆ (ರೂ) |
|---|---|---|---|
| 1 | ಠೇವಣಾತಿಗಳು | ರೂ.533 ಕೋಟಿ | ರೂ.591 ಕೋಟಿ |
| 2 | ಸಾಲ ಮತ್ತು ಮುಂಗಡ | ರೂ.453 ಕೋಟಿ | ರೂ.505 ಕೋಟಿ |
| 3 | ಒಟ್ಟು ವ್ಯವಹಾರ | ರೂ.986 ಕೋಟಿ | ರೂ.1096 ಕೋಟಿ |
| 4 | ನಿವ್ವಳ ಲಾಭ | ರೂ.12.01 ಕೋಟಿ | ರೂ.16.29 ಕೋಟಿ |
| 5 | ಶೇಕಡಾವಾರು ಅನುತ್ಪಾದಕ ಆಸ್ತಿ | 0.07% | 0.05% |
| 6 | ನಿವ್ವಳ ಅನುತ್ಪಾದಕ ಆಸ್ತಿ | Nil | Nil |

### ಸಂಘದ ಸಾಧನೆ

- ಸಂಘದ ಸರ್ವತೋಮುಖ ಪ್ರಗತಿಯನ್ನು ಗುರುತಿಸಿ ರಾಜ್ಯ ಮಟ್ಟದ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯಲ್ಲಿ, ಮೊದಲ ಬಾರಿಗೆ 2024ನೇ ಸಾಲಿನಲ್ಲಿ ಅನುಷ್ಠಾನಿಸಲಾದ ಅವಿಭಜಿತ ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಸರ್ವಾಂಗೀಣ ಪ್ರಗತಿ ಸಾಧಿಸಿದ ಅತ್ಯುತ್ತಮ ಕ್ರೆಡಿಟ್ ಸಹಕಾರ ಸಂಘಕ್ಕೆ ನೀಡಲಾಗುವ "ಸಹಕಾರ ಮಾಣಿಕ್ಯ" ಪ್ರಶಸ್ತಿಯು ಸಂಘಕ್ಕೆ ಸಂದಿದೆ. 2024ನೇ ಸಾಲಿನಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಪ್ರಥಮ ಹಾಗೂ ಏಕೈಕ ಸಹಕಾರ ಸಂಘ.
- ಸ್ಥಾಪನೆಯ 30ನೇ ವರ್ಷದಲ್ಲಿ ರೂ.1000 ಕೋಟಿ ಒಟ್ಟು ವ್ಯವಹಾರವನ್ನು ದಾಖಲಿಸಿ ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಈ ಸಾಧನೆ ಮಾಡಿದ ಪ್ರಪ್ರಥಮ ಕ್ರೆಡಿಟ್ ಕೋ–ಓಪರೇಟಿವ್ ಸಂಘವಾಗಿ ಮೂಡಿ ಬಂದಿರುವ ಹಿನ್ನೆಲೆಯಲ್ಲಿ ಎಸ್.ಸಿ.ಡಿ.ಸಿ.ಸಿ ಬ್ಯಾಂಕ್‌ನ ಮಹಾಸಭೆಯಲ್ಲಿ 'ವಿಶೇಷ ಗೌರವ' ಪ್ರಶಸ್ತಿ ಹಾಗೂ "2023–24ನೇ ಸಾಲಿನ ಸರ್ವತೋಮುಖ ವ್ಯವಹಾರಾಭಿವೃದ್ಧಿ ಹೊಂದಿದ ಅತ್ಯುತ್ತಮ ಕ್ರೆಡಿಟ್ ಸಹಕಾರಿ ಸಂಘ" ಪ್ರಶಸ್ತಿಯನ್ನು ಪಡೆದಿದೆ.
- ಸಂಘಕ್ಕೆ ಸಹಕಾರಿ ಇಲಾಖೆಯಿಂದ 7 ಬಾರಿ ರಾಜ್ಯ ಮಟ್ಟದ ಹಾಗೂ ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನಿಂದ 13 ಬಾರಿ ಜಿಲ್ಲಾ ಮಟ್ಟದ ಅತ್ಯುತ್ತಮ ಕ್ರೆಡಿಟ್ ಸಹಕಾರ ಸಂಘದ ಪ್ರಶಸ್ತಿ ದೊರೆತಿದೆ.
- ಸಂಘದ ಎಲ್ಲಾ ಶಾಖೆಗಳು ಸಂಪೂರ್ಣ ಗಣಕೀಕೃತಗೊಂಡು ಉತ್ಕೃಷ್ಟ ಸೇವೆಯನ್ನು ಸದಸ್ಯರಿಗೆ ನೀಡುತ್ತಿದೆ.
- ಸಂಘದ 25 ಶಾಖೆಗಳಲ್ಲಿ ಈಗಾಗಲೇ 19 ಶಾಖೆಗಳು ಸಂಪೂರ್ಣ ಹವಾನಿಯಂತ್ರಿತವಾಗಿ ಕಾರ್ಯನಿರ್ವಹಿಸುತ್ತಿದೆ. ಉಳಿದ ಶಾಖೆಗಳನ್ನು ಕೂಡ ಶೀಘ್ರದಲ್ಲೇ ಹವಾನಿಯಂತ್ರಣ ಮಾಡಲಾಗುವುದು.
- ಸಂಘಕ್ಕೆ ಹೊಸ ಕಟ್ಟಡ : ಮಂಗಳೂರಿನಲ್ಲಿ ಕೇಂದ್ರ ಕಛೇರಿ ಹೊಂದುವ ಹೊಸ ಕಟ್ಟಡದ ಕಾಮಗಾರಿಯು ಪ್ರಗತಿಯಲ್ಲಿದ್ದು, ಸಪ್ಟೆಂಬರ್ 2025ಕ್ಕೆ ಈ ಸುಸಜ್ಜಿತ ಕಟ್ಟಡವನ್ನು ಲೋಕಾರ್ಪಣೆ ಮಾಡಲು ಉದ್ದೇಶಿಸಲಾಗಿದೆ.

### ಮುಂದಿನ ಯೋಜನೆಗಳು (Vision 2030) (31.03.2030)

- 2030ರ ಮಾರ್ಚ್ 31 ಕ್ಕೆ ರೂ.2,000 ಕೋಟಿ ಒಟ್ಟು ವ್ಯವಹಾರ.
- ಅನುತ್ಪಾದಕ ಆಸ್ತಿಯನ್ನು ಶೇ.0.10 ರೊಳಗೆ ಸೀಮಿತ.
- ರೂ.20 ಕೋಟಿ ನಿವ್ವಳ ಲಾಭ.
- ಆಧುನಿಕ ತಂತ್ರ ಜ್ಞಾನ ಅವಿಷ್ಕಾರಗಳ ಅಳವಡಿಕೆಗಳೊಂದಿಗೆ ಗ್ರಾಹಕರಿಗೆ ಹೆಚ್ಚಿನ ತಂತ್ರಜ್ಞಾನ ಪ್ರೇರಿತ ಸೇವೆಗಳನ್ನು ನೀಡುವುದು.
- ಹೊಸ ಶಾಖೆಗಳನ್ನು ಆರಂಭಿಸಿ, ಶಾಖೆಗಳ ಸಂಖ್ಯೆಯನ್ನು ಒಟ್ಟು 40 ಕ್ಕೆ ಏರಿಸುವುದು.
- ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡನ್ನು ಸತತವಾಗಿ ನೀಡುತ್ತಿರುವುದು.

2024–25ನೇ ಸಾಲಿನ ವರ್ಷಾಂತ್ಯ 31.03.2025ಕ್ಕೆ ಸಂಘವು ಸಾಧಿಸಿರುವ ಪ್ರಗತಿಗೆ ಸಹಕರಿಸಿದ, ಸಂಘದ ಆಡಳಿತ ಮಂಡಳಿಗೆ, ಎಲ್ಲಾ ಠೇವಣಿದಾರ, ಸಾಲಗಾರ ಸದಸ್ಯ ಬಾಂಧವರಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಹಾಗೂ ಎಲ್ಲಾ ಸದಸ್ಯ ಬಾಂಧವರಿಗೆ ವಿಶೇಷ ಧನ್ಯವಾದಗಳು.

ತಮ್ಮ ಸೇವಾ ದಕ್ಷತೆ ಮತ್ತು ಪರಿಶ್ರಮದಿಂದ ಸಂಘದ ಈ ಪ್ರಗತಿಗೆ ಕೊಡುಗೆಯನ್ನು ನೀಡಿದ ಸಂಘದ ಸಿಬ್ಬಂದಿಗಳಿಗೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮುಂದಿನ ವರ್ಷಗಳಲ್ಲಿ ಕೂಡ ತಮ್ಮಿಂದ ಸಹಕಾರವನ್ನು ಬಯಸುತ್ತೇವೆ. ಎಲ್ಲರಿಗೂ ವಿಷು ಹಬ್ಬದ ಶುಭಾಶಯಗಳನ್ನು ಸಲ್ಲಿಸುತ್ತಾ, ಹೊಸ ವಿತ್ತೀಯ ವರ್ಷ 2025–26 ತಮಗೆಲ್ಲರಿಗೂ ಶುಭಕರವಾಗಲೆಂದು ಹಾರೈಸುತ್ತೇನೆ.


(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

### ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ ಹುಟ್ಟುಹಬ್ಬದ ಶುಭಾಶಯಗಳು

ದಿನಾಂಕ 24.02.2025ರಂದು ತನ್ನ 76ನೇ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷರಾದ ಸಹಕಾರ ರತ್ನ **ಡಾ। ಎಂ.ಎನ್.ರಾಜೇಂದ್ರಕುಮಾರ್‌ರವರನ್ನು** ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಅಭಿನಂದಿಸಿ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದ ಸಂದರ್ಭ.



## ಸಾಮಾಜಿಕ ಕಳಕಳಿ



ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ದ.ಕ. ಜಿಲ್ಲಾ ಶಾಖೆಯ ನೂತನ ಶತಮಾನೋತ್ಸವ ಕಟ್ಟಡದ ನಿರ್ಮಾಣ ಕಾರ್ಯಗಳಿಗೆ ಸಂಘದ ವತಿಯಿಂದ ದೇಣಿಗೆಯ ಚೆಕ್‌ನ್ನು ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರಾದ C.A ಶಾಂತಾರಾಮ ಶೆಟ್ಟಿಯವರಿಗೆ ಹಸ್ತಾಂತರಿಸಿದರು.

## ಸಂಘದ ಸಾಲಗಾರ ಸದಸ್ಯರಿಗೆ ಶ್ರೀ ರಾಮ್ ಲೈಫ್ ಇನ್ಸೂರೆನ್ಸ್ ಕಂಪೆನಿಯ ಸಹಯೋಗದೊಂದಿಗೆ ಸಾಲ ಸಂರಕ್ಷಣಾ ಜೀವ ವಿಮಾ ಪಾಲಿಸಿ ಸೌಲಭ್ಯ




ಸಂಘವು ಶ್ರೀ ರಾಮ್ ಲೈಫ್ ಇನ್ಸೂರೆನ್ಸ್ ಕಂಪೆನಿಯ ಸಹಯೋಗದೊಂದಿಗೆ ತನ್ನ ಸಾಲಗಾರ ಸದಸ್ಯರಿಗೆ ಸಾಲ ಸಂರಕ್ಷಣೆ ಜೀವ ವಿಮಾ ಪಾಲಿಸಿ ಸೌಲಭ್ಯವನ್ನು ದಿನಾಂಕ 26.02.2025 ಬುಧವಾರದಂದು ನಡೆದ ಸಮಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಅನುಷ್ಠಾನಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳು, ವಿಮಾ ಕಂಪೆನಿಯ ಅಧಿಕಾರಿಗಳು, ಸಂಘದ ಕೇಂದ್ರ ಕಛೇರಿ ಸಿಬ್ಬಂದಿಗಳು, ಎಲ್ಲಾ ಶಾಖಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## 2024-25ನೇ ಸಾಲಿನಲ್ಲಿ 31.03.2025ಕ್ಕೆ ಠೇವಣಾತಿ, ಸಾಲ, ಎನ್.ಪಿ.ಎ. ಹಾಗೂ ಲಾಭಗಳ ಗುರಿಗಳನ್ನು ಸಾಧಿಸಿ ಪ್ರಗತಿಯನ್ನು ಸಾಧಿಸಿದ ಶಾಖೆಗಳಿಗೆ ಅಭಿನಂದನೆಗಳು



ಎಲ್ಲಾ 4 ಗುರಿಗಳನ್ನು ಸಾಧಿಸಿದ ವೆಲೆನ್ಸೀಯಾ ಶಾಖೆ-ಮೊದಲನೇ ಸ್ಥಾನ



4 ಗುರಿಗಳಲ್ಲಿ 3 ಗುರಿಗಳನ್ನು ಸಾಧಿಸಿದ ಬ್ರಹ್ಮಾವರ ಶಾಖೆ



4 ಗುರಿಗಳಲ್ಲಿ 3 ಗುರಿಗಳನ್ನು ಸಾಧಿಸಿದ ಮೂಡಬಿದ್ರಿ ಶಾಖೆ



4 ಗುರಿಗಳಲ್ಲಿ 3 ಗುರಿಗಳನ್ನು ಸಾಧಿಸಿದ ಹಂಪನಕಟ್ಟೆ ಶಾಖೆ

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀಮತಿ ನಿರ್ಮಲ ಶೆಟ್ಟಿ | ಹೆಬ್ರಿ | ಶ್ರೀ ಭರತ್‌ಎಸ್. | ಶಿರ್ವ |
| ಶ್ರೀಮತಿ ತುಳಸಿ | ಸುರತ್ಕಲ್ | ಶ್ರೀ ಅಖಿಲ್ ರೈ ಬಿ.ಕೆ. | ಚಿಲಿಂಬಿ |
| ಶ್ರೀಮತಿ ಸ್ವಪ್ನ ಬಿ. | ತೊಕ್ಕೊಟ್ಟು | ಶ್ರೀಮತಿ ವಿಧಿಶಾ | ಉಪ್ಪಿನಂಗಡಿ |
| ಕು. ಅಕ್ಷತ ಕುಮಾರಿ | ಚಿಲಿಂಬಿ | ಶ್ರೀಮತಿ ಅಶ್ವಿನಿ | ಉಡುಪಿ |
| ಕು. ಶ್ರುತಿ ಕೆ. | ಬಿ.ಸಿ.ರೋಡ್ | ಶ್ರೀ ಮೋಹನ್‌ದಾಸ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀಮತಿ ಲಾವಣ್ಯ | ಉಡುಪಿ ನಗರ | ಶ್ರೀ ಸೇಸಪ್ಪ ನ್ಯಾಕ್ | ಸುಳ್ಯ |
| ಕು. ಅಶ್ವಿತಾ ಎಂ. | ಕಡಬ | ಶ್ರೀಮತಿ ಉಷಾ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀ ಬಾಲಕೃಷ್ಣ ರೈ | ಬಿ.ಸಿ.ರೋಡ್ | ಶ್ರೀ ರಾಘವೇಂದ್ರ ರಾವ್ | ಉಡುಪಿ ನಗರ |
| ಶ್ರೀ ಶ್ರೀಹರ್ಷ ಡಿಎಸ್. | ಬಿ.ಸಿ.ರೋಡ್ | ಶ್ರೀಮತಿ ಶ್ರೀಲತಾ ಶೆಟ್ಟಿ | ಬೈಂದೂರು |
| ಶ್ರೀಮತಿ ಜ್ಯೋತಿ | ಕೇಂದ್ರ ಕಛೇರಿ | ಶ್ರೀ ಕುಂಞ | ಮೂಡಬಿದ್ರೆ |
| ಶ್ರೀಮತಿ ಅನಿತಾ ಎ. | ವೆಲೆನ್ಸೀಯಾ | ಶ್ರೀ ಮಹಾಬಲ ಶೆಟ್ಟಿ | ಮಂಗಳೂರು |
| ಶ್ರೀ ಕರುಣಾಕರ್ ಶೆಟ್ಟಿ | ಸುಳ್ಯ | ಶ್ರೀ ರಮೇಶ್ ಪಿ | ತೊಕ್ಕೊಟ್ಟು |
| ಶ್ರೀ ಗಣೇಶ್ ಜಿ. ಕೆ. | ಕೇಂದ್ರ ಕಛೇರಿ | ಶ್ರೀಮತಿ ಉಷಾ ಬಿ. | ಉಪ್ಪಿನಂಗಡಿ |
| ಶ್ರೀಮತಿ ಜಯಂತಿ ಖಾರ್ವಿ | ಕುಂದಾಪುರ | ಶ್ರೀ ಹರೀಶ್ ಮೂಲ್ಯ | ವಿಟ್ಲ |
| ಶ್ರೀ ಸೂರಜ್ ಭಂಡಾರಿ | ಸುರತ್ಕಲ್ | ಶ್ರೀ ನವೀನ್‌ಕುಮಾರ್ | ಕಾರ್ಕಳ |
| ಶ್ರೀ ಮೋಹನ್‌ದಾಸ್ ಶೆಟ್ಟಿ | ಉಪ್ಪಿನಂಗಡಿ | ಶ್ರೀ ನಾಗರಾಜ್ | ಕುಂದಾಪುರ |
| ಶ್ರೀಮತಿ ಮಿಸ್ರಿಯ ಪಿ.ಐ. | ಉಪ್ಪಿನಂಗಡಿ | ಶ್ರೀ ನಾಗರಾಜ್ ಎಚ್. | ಬೈಂದೂರು |
| ಶ್ರೀ ಶಮಿತ್‌ಕುಮಾರ್ | ಹಂಪನಕಟ್ಟೆ | ಶ್ರೀಮತಿ ನಿಶ್ಮಿತಾ | ಮುಲ್ಕಿ |

# ಅಭಿನಂದನೆಗಳು

- ಸಂಘದ ಉಡುಪಿ ಶಾಖೆಯ ಸಿಬ್ಬಂದಿ ಚಿ| ಸೌ| ಸುಶ್ಮಿತಾರವರ ವಿವಾಹವು ಚಿ| ಸಚಿನ್‌ರವರೊಂದಿಗೆ ಇತ್ತೀಚೆಗೆ ಜರಗಿತು.
- ಸಂಘದ ಸುಳ್ಯ ಶಾಖೆಯ ಸಿಬ್ಬಂದಿ ಚಿ| ಮಿಲನ್ ಎಂ. ರವರ ವಿವಾಹವು ಚಿ| ಸೌ| ಹರ್ಷಿತಾ ಕೆ. ರವರೊಂದಿಗೆ ಇತ್ತೀಚೆಗೆ ಜರಗಿತು.
- ಸಂಘದ ಪುತ್ತೂರು ಶಾಖೆಯ ಸಿಬ್ಬಂದಿ ಚಿ| ಬಾಲಕೃಷ್ಣ ಕೆ.ಸಿ. ನ್ಯಾಕ್‌ರವರ ವಿವಾಹವು ಚಿ| ಸೌ| ಸಂಧ್ಯಾ ಸಿ. ನ್ಯಾಕ್‌ರವರೊಂದಿಗೆ ಇತ್ತೀಚೆಗೆ ಜರಗಿತು.

ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ-ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

- ಸಂಘದ ಮುಲ್ಕಿ ಶಾಖೆಯ ಸಿಬ್ಬಂದಿ ಶ್ರೀ ಧನಂಜಯ್ ಕುಮಾರ್‌ರವರ ಹೊಸ ಮನೆ "ರಜತಾದ್ರಿ" ಇದರ ಗೃಹಪ್ರವೇಶವು ಇತ್ತೀಚೆಗೆ ಜರಗಿತು.
- ಸಂಘದ ಪುತ್ತೂರು ಶಾಖೆಯ ಸಿಬ್ಬಂದಿ ಕು| ಸಪ್ತಮಿ ಎಸ್. ರೈರವರ ಹೊಸ ಮನೆ "ಸತ್ಯಾಶ್ರಯ" ಇದರ ಗೃಹಪ್ರವೇಶವು ಇತ್ತೀಚೆಗೆ ಜರಗಿತು.

**ಇವರಿಗೆ ಹಾರ್ದಿಕ ಅಭಿನಂದನೆಗಳು.**

## 2025-2030ರ ಅವಧಿಗೆ ಚುನಾಯಿತರಾದ ಸಂಘದ ನೂತನ ಆಡಳಿತ ಮಂಡಳಿ



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು



ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ
ಉಪಾಧ್ಯಕ್ಷರು



ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ
ನಿರ್ದೇಶಕರು



ಶ್ರೀ ಕೆ. ಸೀತಾರಾಮ ರೈ ಸವಣೂರು
ನಿರ್ದೇಶಕರು



ಡಾ| ಕೆ. ಸುಭಾಶ್ಚಂದ್ರ ಶೆಟ್ಟಿ
ನಿರ್ದೇಶಕರು



ಶ್ರೀ ಪಿ ಶಿವರಾಮ ಅಡ್ಯಂತಾಯ
ನಿರ್ದೇಶಕರು



ಸಿಎ ಎಚ್. ಆರ್. ಶೆಟ್ಟಿ
ನಿರ್ದೇಶಕರು



ಶ್ರೀ ವಿಠಲ ಪಿ. ಶೆಟ್ಟಿ
ನಿರ್ದೇಶಕರು



ಶ್ರೀ ಯಂ. ರಾಮಯ ಶೆಟ್ಟಿ
ನಿರ್ದೇಶಕರು



ಶ್ರೀ ಅರುಣ್‌ಕುಮಾರ್ ಶೆಟ್ಟಿ
ನಿರ್ದೇಶಕರು



ಶ್ರೀ ಪಿ.ಬಿ. ದಿವಾಕರ ರೈ
ನಿರ್ದೇಶಕರು



ಶ್ರೀ ರವೀಂದ್ರನಾಥ ಜಿ. ಹೆಗ್ಡೆ
ನಿರ್ದೇಶಕರು



ಶ್ರೀ ಕುಂಬ್ರ ದಯಾಕರ ಆಳ್ವ
ನಿರ್ದೇಶಕರು



ಶ್ರೀ ಬೆಳ್ಳಿಪಾಡಿ ಪ್ರಸಾದ್‌ಕೌಶಲ್ ಶೆಟ್ಟಿ
ನಿರ್ದೇಶಕರು



ಶ್ರೀ ಎ. ಚಿಕ್ಕಪ್ಪ ನ್ಯಾಕ್
ನಿರ್ದೇಶಕರು



ಡಾ| ಬಿ. ಸಂಜೀವ ರೈ
ನಿರ್ದೇಶಕರು

Private Circulation only

**BOOK POST**

To ..........................................................................

..........................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.